**ಶ್ರೀ ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೇಟ್ ಲೀಮಿಟೆಡ್. ಕಂಪನಿಯವರು ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕ, ನೇಜ ಗ್ರಾಮ ಸರ್ವೆ. ನಂ. 82/1, ರಲ್ಲಿ ಹೊಸದಾಗಿ ಆರ್ಗ್ಯಾನಿಕ್ಸ್ ರಾಸಾಯನಿಕಗಳಾದ ಡೈ ಇಥೈಲ್ ಥ್ಯಾಲೇಟ ದಿನ ಪ್ರತಿ 5 ಟನ್ ಹಾಗೂ ಫಾರ್ಮಲ್‌ಡಿಹೈಡ್ ದಿನ ಪ್ರತಿ 10 ಟನ್ ಉತ್ಪಾದನೆ ಮಾಡಲು ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಸಾರ್ವಜನಿಕ ಪರಿಸರ ಕುರಿತು ಆಲಿಕೆಯ ಸಭೆ. ಈ ಉದ್ದೇಶಿತ ಯೋಜನೆಯ ಸ್ಥಾಪನೆ ಹಿನ್ನೆಲೆಯಲ್ಲಿ ನಡೆದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.**

ದಿನಾಂಕ: 19-06-2019.

ವೇಳೆ : ಬೆಳಿಗ್ಗೆ 11.30 ಘಂಟೆಗೆ,

ಸ್ಥಳ : ಶ್ರೀ ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೇಟ್ ಲೀಮಿಟೆಡ್, ಸರ್ವೆ. ನಂ. 82/1, ನೇಜ ಗ್ರಾಮ ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಶ್ರೀ ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೇಟ್ ಲೀಮಿಟೆಡ್. ಕಂಪನಿಯವರು ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕ, ನೇಜ ಗ್ರಾಮ ಸರ್ವೆ. ನಂ. 82/1, ರಲ್ಲಿ ಹೊಸದಾಗಿ ಆರ್ಗ್ಯಾನಿಕ್ಸ್ ರಾಸಾಯನಿಕಗಳಾದ ಡೈ ಇಥೈಲ್ ಥ್ಯಾಲೇಟ ದಿನ ಪ್ರತಿ 5 ಟನ್ ಹಾಗೂ ಫಾರ್ಮಲ್‌ಡಿಹೈಡ್ ದಿನ ಪ್ರತಿ 10 ಟನ್ ಉತ್ಪಾದನೆ ಮಾಡಲು ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 19-06-2019 ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 11.00 ಘಂಟೆಗೆ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | |
|---|---|
| ಉದ್ದೇಶಿತ ಕೈಗಾರಿಕೆಯ ಹೆಸರು ಮತ್ತು ವಿಳಾಸ | :ಶ್ರೀ ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೇಟ್ ಲೀಮಿಟೆಡ್, ಸರ್ವೆ. ನಂ. 82/1, ನೇಜ ಗ್ರಾಮ ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ಜಾಗೃತಿ ಮೂಡಿಸಲು ಹಮ್ಮಿಕೊಂಡ ವಿವರ ಮತ್ತು ಪತ್ರಿಕಾ ಪ್ರಕಟನೆ | : ಅನುಬಂಧ-4 |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು | : ಅನುಬಂಧ-5 |
| ಯೋಜನಾ ವರದಿ ಕರಡು ಸಾರಾಂಶ | : ಅನುಬಂಧ-6 |
| ಕಾರ್ಖಾನೆಯ ಪ್ರತಿನಿಧಿಗಳು ಸಾರ್ವಜನಿಕರ ಅಹವಾಲಿಗೆ ನೀಡಿದ ಲಿಖಿತ ಉತ್ತರ | : ಅನುಬಂಧ-7 |

ಪೀಠಿಕೆ:

ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14-09-2006ರ (ತಿದ್ದುಪಡೆ ಇಲ್ಲಿಯವರೆಗೆ 01-12-2009) ಪ್ರಕಾರ ಸದರಿ ಯೋಜನೆಯು ಪರಿಸರ, ಅರಣ್ಯ ಮತ್ತು ಮಂತ್ರಾಲಯ ಹವಾಮಾನ ಬದಲಾವಣೆ ಸಚಿವಾಲಯ ಭಾರತ ಸರಕಾರ, ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ನೀಡುವ ಮೊದಲು ಯೋಜನಗಳಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ನಿರ್ದೇಶಕರು, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರಕಾರ ಇವರು ಸದರಿ ಯೋಜನೆಯ **Standards Terms of reference (TOR)** ಅನ್ನು ದಿನಾಂಕ: 05-04-2018 ರಂದು ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ **ಶ್ರೀ ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೇಟ್ ಲೀಮಿಟೆಡ್ ಸರ್ವೆ. ನಂ. 82/1, ನೇಜ ಗ್ರಾಮ ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ** ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅಧಿಭೋಗದಾರರು ಪತ್ರದ ದಿನಾಂಕ: 24-01-2019 ರ ಮೂಲಕ ಕರ್ನಾಟಕ ರಾಜ್ಯ ಮಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು "ಪ್ರಜಾವಾಣಿ" (ಕನ್ನಡ), "ದಿ ಟೈಮ್ಸ್ ಆಫ್ ಇಂಡಿಯಾ" (ಆಂಗ್ಲ) ಭಾಷೆ 18-05-2019 ರಂದು ಹಾಗೂ ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಪ್ರತಿಕೆಯಾದ "ವಿಜಯವಾಣಿ" (ಕನ್ನಡ) ಪತ್ರಿಕೆಯಲ್ಲಿ 22-05-2019 ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲು ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಜೊತೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಕುರಿತು ಪ್ರಚಾರ ಮಾಡಲಾಗಿರುತ್ತದೆ. ಇದರ ವಿವರಗಳನ್ನು **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 19-06-2019 ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು ಡಾ. ಎಸ್.ಬಿ. ಬೊಮ್ಮನಹಳ್ಳಿ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರಿಗೆ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಶ್ರೀ ವಿಜಯಕುಮಾರ ಟಿ ಕಡಕಭಾವಿ, ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿಗಳು, ಕ ರಾ ಮಾ

ನಿ ಮಂ, ಧಾರವಾಡ, ಉಪವಿಭಾಗಾಧಿಕಾರಿಗಳು ಚಿಕ್ಕೋಡಿ, ತಹಶೀಲ್ದಾರ ಚಿಕ್ಕೋಡಿ ಹಾಗೂ ಈ ಸಭೆಗೆ ಆಗಮಿಸಿದಂತಹ ಇನ್ನಿತರ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ನಾಗರಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಆರು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿಧರು. ಮುಂದಿನ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಇಕ್ವಿನಾಕ್ಸ್ ಎನ್ವಿರೋನಮೆಂಟ್ (ಐ) (ಪ್ರೈ) ಲಿಮಿಟೆಡ ಪರಿಸರ ಅಭಿಯಂತರು, ಸಲಹೆ ಮತ್ತು ವಿಶ್ಲೇಷಕ, ಕೊಲ್ಲಾಪುರ (ಮಹಾರಾಷ್ಟ್ರ ರಾಜ್ಯ)ನವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ-6 ರಲ್ಲಿ ಲಗತ್ತಿಸಲಾಗಿದೆ.

ಶ್ರೀ ವಿಜಯಕುಮಾರ ಟಿ ಕಡಕಭಾವಿ, ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿಗಳು, ಕ ರಾ ಮಾ ನಿ ಮಂ, ಧಾರವಾಡ, ಅಧಿಕಾರಿಗಳು ಮಾತನಾಡುತ್ತಾ ಈ ದಿನ ಪರಿಸರ ಸಾರ್ವಜನಿಕ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸುತ್ತಿದ್ದೇವೆ. ಕೈಗಾರಿಕೆಯು ರಾಸಾಯನಿಕ ಉತ್ಪನಗಳನ್ನು ತಯಾರಿಸಲು ಉದ್ದೇಶಿಸಿದ್ದು ಆದಕಾರಣ ಕೈಗಾರಿಕೆಯವರು ಭಾರತ ಸರ್ಕಾರ ಅರಣ್ಯ ಪರಿಸರ ಮಂತ್ರಾಲಯ ಮತ್ತು ಹವಾಮಾನ ಬದಲಾವಣೆ ಇಲಾಖೆಯ ವಿಮೋಚನಾ ಪತ್ರ ಪಡೆಯುವುದು ಕಡ್ಡಾಯವಾಗಿರುವದರಿಂದ, ಆ ಪರಿಸರ ವಿಮೋಚನಾ ಪತ್ರವನ್ನು ಪಡೆಯಲಿಕ್ಕೆ ಇರತಕ್ಕಂತಹ ವಿಧಾನದ ಅಂಗವಾಗಿ ಇವತ್ತು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸುತ್ತಿದ್ದೇವೆ.

ಈಗಾಗಲೇ ಚಂದ್ರೇಶ್ವರಿ ಕೆಮಿಕಲ್ಸ ಪ್ರೈವೆಟ್ ಲಿಮಿಟೆಡ್ ಕೈಗಾರಿಕೆ ವತಿಯಿಂದ ಪರಿಸರ ಸಲಹೆಗಾರರು ಪ್ರಸ್ತಾವಿತ ಉದ್ದಿಮೆಯಿಂದ ಮುಂದೆ ಪರಿಸರದ ಮೇಲೆ ಉಂಟಾಗುವಂತಹ ದುಷ್ಪರಿಣಾಮಗಳ ಬಗ್ಗೆ ಮತ್ತು ಮಾಲಿನ್ಯವನ್ನು ತಡೆಗಟ್ಟುವ ಕ್ರಮಗಳ ಕುರಿತು ವಿವರಿಸಿದ್ದಾರೆ. ಎಷ್ಟು ಪ್ರಮಾಣದಲ್ಲಿ ಈ ಪ್ರದೇಶದಲ್ಲಿ ಮಾಲಿನ್ಯ ಇರುತ್ತದೆ ಎನ್ನುವ ವಿವರಣೆಯನ್ನು ಉದ್ದಿಮೆಯ ಸಲಹೆಗಾರರು ಈಗಾಗಲೇ ತಿಳಿಸಿರುತ್ತಾರೆ. ಇದರ ಜೊತೆಗೆ ಕೆಲವೊಂದು ವಿಷಯಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ಉದ್ದಮೆ ಸಲಹೆಗಾರರು ಟಿಪ್ಪಣಿ ಮಾಡಿಕೊಳ್ಳಬೇಕು ಅದನ್ನು ಅವರು ಅಂತಿಮ ಪ್ರತಿ Impact Environment Assessment Report ನಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ತಯಾರಿಸಿದರೆ ಮುಂದೆ ಯಾವುದೇ ರೀತಿಯ ತೊಂದರೆಗಳು ಬರುವುದಿಲ್ಲ ಎನ್ನುವ ಸದುದ್ದೇಶವಾಗಿದೆ.

ಪರಿಸರ ಸಲಹೆಗಾರರು ಈಗಾಗಲೇ ಪ್ರಸ್ತಾವನೆ ಸಲ್ಲಿಸಿರುವದರಲ್ಲಿ ನ್ಯೂನತೆಗಳು ಕಂಡುಬಂದಿರುತ್ತವೆ. ಆದಕಾರಣ ಪೂರ್ಣ ವರದಿ ಸಲ್ಲಿಸುವಾಗ ಸರಿ ಪಡಿಸಿ ಸಲ್ಲಿಸುವಂತೆ ತಿಳಿಸಿದರು. ಮುಖ್ಯವಾಗಿ ಉತ್ಪನ್ನ 15 ಟನ ಪ್ರತಿ ದಿನ ಎಂದು ಹೇಳಿರುತ್ತಾರೆ. ಆಮೇಲೆ ಕಚ್ಚಾವಸ್ತುಗಳನ್ನು ಪ್ರತಿ ತಿಂಗಳಿಗೆ ಪ್ರಸ್ತಾವಿಸಿರುತ್ತಾರೆ. ಹಾಗಾಗಿ ಉತ್ಪನ್ನಗಳನ್ನು 450 ಟನ ಪ್ರತಿ ತಿಂಗಳು ಎಂದು ಪರಿಗಣಿಸಿದರೆ, ಕಚ್ಚಾ ವಸ್ತಗಳನ್ನು ಒಟ್ಟು

ಕೂಡಿಸಿದರೆ ಪ್ರತಿ ತಿಂಗಳಿಗೆ ಅದು ಸರಿ ಹೊಂದುವುದಿಲ್ಲ ಇದನ್ನು ಸರಿ ಪಡಿಸಿಕೊಳ್ಳಬೇಕು. ಉತ್ಪನ್ನದ ಚಟುವಟಿಕೆಯಲ್ಲಿ reactor ಗಳು ಇರುವದರಿಂದ ಮತ್ತು ಇದು ರಾಸಾಯನಿಕ ಕೈಗಾರಿಕೆ ಆಗಿರುವದರಿಂದ ಹಾಗೂ organic chemical/highly chemical volatile matter ಇರುವದರಿಂದ process emissions ಎರಡು reactor ಗಳಿಂದ ಬಹಳಷ್ಟು ಬರುತ್ತದೆ. ಆ process emissions ನಿಯಂತ್ರಣ ಮಾಡಲಕ್ಕೆ ಒಂದು ನಿಂಯತ್ರಣ equipment ನ್ನು propose ಮಾಡಬೇಕಾಗಿತ್ತು, ಅದು ಬಿಟ್ಟುಹೋಗಿದೆ. ಅದನ್ನು ಸಲಹೆಗಾರರು ಟಪ್ಪಣಿ ಮಾಡಿ ಕೊಂಡು ನಿಯಂತ್ರಣ equipment ನ್ನು ಅಳವಡಿಸುವ ಕೊಳ್ಳಬೇಕು. ಹಾಗೆ ನೀರಿನ ಸಮತೋಲನೆಯಲ್ಲಿ ಒಂದು ವಿಷಯ ಎನೆಂದರೆ ಇವು ಎರಡು Stream ಇದ್ದು low BOD & high BOD or low TDS & high TDS ಎಂದು ಎರಡು Stream ಗಳಿವೆ ಎಂದು ಹೇಳಿರುತ್ತಾರೆ. 5400 liter ಪ್ರತಿ ದಿನಕ್ಕೆ High TDS ಗೆ ಮಾತ್ರ treatment Proposal ಹೇಳಿರುತ್ತಾರೆ. ಮತ್ತು low TDS ಗೆ ಅದು Direct ಆಗಿ recyle ಮಾಡುತ್ತೇವೆ ಅಂತಾ report ನಲ್ಲಿ ಇರುತ್ತದೆ. ಆದರೆ high TDS (5400) liter ಪ್ರತಿ ದಿನಕ್ಕೆ ಬಂದಾಗ It will have very high COD because of organic solids. High BOD ಬರುವುದರಿಂದ Single Stage aeration may not be adequate ಸಾಕುಗುವುದಿಲ್ಲ ಎಂದು ನನ್ನ ಅನಿಸಿಕೆ. ಮತ್ತು ಅದನ್ನು ಪರಿಷ್ಕರಣೆ ಮಾಡಬೇಕು. ನೀರನ್ನು ನದಿಯಿಂದ ತೆಗೆದುಕೊಳ್ಳಬೇಕಾದರೆ ನೀರಾವರಿ ಇಲಾಖೆಯಿಂದ ಅನುಮತಿ ಪತ್ರ ಪಡೆಯಬೇಕಾಗುತ್ತದೆ? Coal crusher & Coal Ash Storage ನಿಂದ Lumps ಬರುವದರಿಂದ ಯಾವುದೇ ರೀತಿಯ control equipment propose ಮಾಡಿದ್ದು ಕಂಡು ಬಂದಿಲ್ಲ. ಜೊತೆಗೆ ಎಲ್ಲವೂ organic chemical ಆಗಿರುವುದರಿಂದ & highly volatile ಇರುವದರಿಂದ, volatile organic compound ಸಾಂದ್ರತೆ ಎಷ್ಟು ಇದೆ. ಈಗಾಗಲೇ Baseline study ಯಲ್ಲಿ VOC parameter ಮಾಡಬೇಕಾಗಿತ್ತು ಆದರೆ ಮಾಡಿಲ್ಲ ಅದನ್ನು ಮಾಡಿದರೆ ಒಳ್ಳೆಯದು. ಇದು Baseline study ವರದಿ ಇರುವುದರಿಂದ ಈಗ ಇರುವ VOC level ಎಷ್ಟು ಇದೆ ಮತ್ತು ಕಾರ್ಖಾನೆ ಪ್ರಾರಂಭವಾದಾಗ ಎಷ್ಟು ಪ್ರಮಾಣ ಹೆಚ್ಚಿಗೆ ಆಗುತ್ತದೆ ಎನ್ನುವುದು ಗೊತ್ತಾಗಬೇಕು ಎಂದರೆ. Baseline VOC ಮಾಡಬೇಕಾಗಿರುತ್ತದೆ. Final Environment impact assessment report ನಲ್ಲಿ ಸೇರಿಸಿಕೊಂಡರೆ ಅದನ್ನು MOEF ಗೆ ಸಲ್ಲಿಸಿದಾಗ ಮುಂದಿನ ಆಡೆ ತಡೆಗಳು ಇರಲಾರದು ಎಂದು ನನ್ನ ಒಂದು ಅಭಿಪ್ರಾಯ. ಪರಿಸರ ಸಲಹೆಗಾರರು ಈಗಾಗಲೇ ಕೈಗಾರಿಕೆ ಬಗ್ಗೆ ಪ್ರಸ್ತಾವನೆಯನ್ನು ನಿಮ್ಮ ಮುಂದೆ ಇಟ್ಟಿದ್ದಾರೆ ಹಾಗೂ 30 ದಿವಸ ಮುಂಚಿತವಾಗಿ 5-6 ಕಛೇರಿಗಳಲ್ಲಿ ಇದರ ಬಗ್ಗೆ ಮಾಹಿತಿಯನ್ನು ಇಟ್ಟಿದ್ದೀವಿ. ಇದನ್ನು ನೋಡಿ objection file ಯಾರು ಮಾಡಿಲ್ಲಾ, ಈಗ ಕೊನೆಯ ಅವಕಾಶ ನೀಡಲು ತಮ್ಮ ಅಭಿಪ್ರಾಯ ಸಂಗ್ರಹಿಸಲು ಸಭೆಯನ್ನು ಕರೆದಿರುತ್ತೇವೆ. ನಿಮ್ಮದೇ ಆದ ಅನಿಸಕೆ ಇದ್ದರೂ ಈ ಒಂದು ಸಭೆಯ ಮುಂದೆ ಯಾರದೇ ಭಯ, ಆತಂಕವಿಲ್ಲದೆ ನೀವು ಕೈಗಾರಿಕೆಯ ಯಾವುದೇ ವಿಚಾರ ಇಟ್ಟಕೊಂಡಿದ್ದರೆ ನಮ್ಮ ಮುಂದೆ ಹೇಳಬಹುದು, ನೀವು ಹೇಳಿದ ಆನಿಸಿಕೆಗಳನ್ನು ವಿಡಿಯೋ ಮತ್ತು ಅಡಿಯೋ ಮಾಡಲಾಗುತ್ತದೆ. ಇದನ್ನು MOEF ಗೆ ಕಳುಹಿಸಿಕೊಡುತ್ತೇವೆ, ತಮ್ಮ ಸಲಹೆಗಳು ಇದ್ದರೆ ನೇರವಾಗಿ ಮತ್ತು ನಿರ್ಭಯವಾಗಿ ನಿಮ್ಮ ಆನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ಇದೆ. ತಮ್ಮ ಹೆಸರು ಮತ್ತು ವಿಳಾಸ ಹೇಳಿ ತಮ್ಮ ಆನಿಸಿಕೆಗಳನ್ನು ವ್ಯಕ್ತಪಡಿಸಿಲು ತಮ್ಮಲ್ಲಿ ಕೋರಿಕೊಳ್ಳುತ್ತೇನೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

1. **ಶ್ರೀ. ಎ. ಬಿ. ಬೆಂಡವಾಡೆ, ಶಮಣೆವಾಡಿ**
ಸುಮಾರು ರೂ. 06 ಕೋಟಿ ವೆಚ್ಚದ ಈ ಕೈಗಾರಿಕೆ ಹಳ್ಳಿಯಲ್ಲಿ ಸ್ಥಾಪನೆ ಆಗುವುದರಿಂದ ನಮಗೆ ಸಂತೋಷ ಉಂಟಾಗಿದೆ. ಈಗಾಗಲೇ ಪರಿಸರಕ್ಕೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲಾ ಎಂದು ತಿಳಿಸಿರುತ್ತಾರೆ. ಇದರಿಂದ ಮಾನ್ಯ ಜಿಲ್ಲಾಧಿಕಾರಿಗಳು ಕೈಗಾರಿಕೆ ಸ್ಥಾಪನೆ ಮಾಡಲು ಒಪ್ಪಿಗೆ ನೀಡುತ್ತಾರೆಂದು ಭಾವಿಸುತ್ತೇನೆ. ಇಲ್ಲಿ ಉದ್ಯೋಗದ ಸಮಸ್ಯೆ ಬಹಳವಾಗಿದ್ದು, ಈ ಕೈಗಾರಿಕೆ ಸ್ಥಾಪನೆ ಆದರೆ ಸುಮಾರು 40–50 ಜನರಿಗೆ ಉದ್ಯೋಗ ಅವಕಾಶ ಸಿಗಬಹುದೆಂದು ಕೈಗಾರಿಕೆಯವರು ತಿಳಿಸಿದ್ದಾರೆ. ಆದ ಕಾರಣ ಈ ಕೈಗಾರಿಕೆ ಸ್ಥಾಪನೆ ಆಗಲು ನನ್ನ ಬೆಂಬಲವಿರುತ್ತದೆ. ಈಗಾಗಲೇ ಈ ಭಾಗದಲ್ಲಿ ಗಾರಮೆಂಟ್, ಟೆಕ್ಷಟೈಲ್‌ಗಳು ಇರುವುದರಿಂದ ನಿರುದ್ಯೋಗ ಸಮಸ್ಯೆ ಕಡಿಮೆ ಆಗಿದೆ, ಈ ಕೈಗಾರಿಕೆಯನ್ನು ಹೊಸದಾಗಿ ಪ್ರಾರಂಭಿಸಲು ಅನುಮತಿ ನೀಡಿದರೆ ಮತ್ತಷ್ಟು ಉದ್ಯೋಗದ ಸಮಸ್ಯೆ ಕಡಿಮೆ ಆಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

2. **ಶ್ರೀ. ಬಾಹುಬಲಿ ಪಾಟೀಲ, ಬೆಡಕಿಹಾಳ**
ಶ್ರೀ. ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಕಾರ್ಖಾನೆ ಆಗುತ್ತಿರುವುದು ಒಂದು ಒಳ್ಳೆಯ ವಿಷಯ. ಈ ಕೈಗಾರಿಕೆ ಆಗುವುದರಿಂದ ಯಾವುದೇ ತರಹದ ಭೂಮಿ ತಾಯಿಗೆ ತೊಂದರೆ ಆಗುವುದಿಲ್ಲವೆಂದು ತಿಳಿಸಿದ್ದಾರೆ, ಅದೆ ರೀತಿಯಾಗಿ ಕೈಗಾರಿಕೆಯವರು ಕೂಡಾ ನಡೆಯಬೇಕು ಮತ್ತು ರಾಸಾಯನಿಕ ಘಟಕ ಮತ್ತು ಶುದ್ಧೀಕರಣ ಘಟಕವನ್ನು ಇಲ್ಲಿ ಅಳವಡಿಸಬೇಕು. ಸರಿಯಾಗಿ ಮಳೆಯಿಲ್ಲದ ಕಾರಣ ಈ ಭಾಗದ ಸುತ್ತಮುತ್ತಲಿನ ಜನ ಬಹಳ ಕಷ್ಟಪಡುತ್ತಿದ್ದು, ಅಂತಹ ಜನರನ್ನು ಈ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕಾಗಿ ವಿನಂತಿಸುತ್ತೇನೆ. ಈ ವಿಷಯವಾಗಿ ಅಧಿಕಾರಿಗಳು ಕೂಡಾ ಇದಕ್ಕೆ ನಿರ್ಬಂಧನೆ ಹಾಕುಬೇಕು ಹಾಗೂ ಈ ಭಾಗದಲ್ಲಿ ಕೈಗಾರಿಕೆ ಬಂದರೆ ಸ್ವಾಗತ ಬಯಸುತ್ತೆನೆ ಮತ್ತು ಸುತ್ತಮುತ್ತಲಿನ ಹಳ್ಳಿಗಳಿಗೂ ಕೂಡಾ ಶುಭವಾಗಲಿ ಎಂದು ಬಯಸುತ್ತೆನೆ.

3. **ಶ್ರೀ. ಅರುಣ ಬೋನೆ, ನೇಜ.**
ಈ ಕೈಗಾರಿಕೆಯು ವಸತಿ ಗ್ರಾಮದ ಆಚೆ ಇರುವುದರಿಂದ ನೇಜ ಗ್ರಾಮದ ಗ್ರಾಮಸ್ಥರಿಗೆ ಯಾವುದೇ ತೊಂದರೆಗಳು ಆಗುವುದಿಲ್ಲಾ ಅಂದು ಅಭಿಪ್ರಾಯ ವ್ಯಕ್ತಪಡಿಸಿ ಸದರಿ ನೇಜ ಗ್ರಾಮದ ಜನರಿಗೆ ಉದ್ಯೋಗದಲ್ಲಿ ಹೆಚ್ಚಿನ ಮಾನ್ಯತೆ ಕೊಡಬೇಕು ಎಂದು ನಿರ್ಬಂಧನೆ ಹಾಕಿ ಕೈಗಾರಿಕೆ ಸ್ಥಾಪಿಸಲು ಅನುಮತಿ ಕೊಡಬೇಕೆಂದು ಕೋರಿದರು.

4. **ವಿ. ಸುನಂದಾ ರೆಡ್ಡಿ: ನಳಂದ ಜಿಲ್ಲೆ, ತೆಲಗಾಂಣ ನಿವಾಸಿ**
ನಾನು ಭಾರತ ದೇಶದಲ್ಲಿಯೇ ಉದ್ದಿಮೆಗಳನ್ನು ಪ್ರೋತ್ಸಾಹಿಸುವ ಮೊದಲ ಪರಿಸರವಾದಿ. ಸಾಮಾನ್ಯವಾಗಿ ಪರಿಸರವಾದಿಗಳು ಕೈಗಾರಿಕೆಯನ್ನು ವಿರೋಧಿಸುತ್ತಾರೆ. ಆದರೆ ನಾನು ಕೈಗಾರಿಕೆಗಳ ಪೋಷಕ. ಉದ್ದಿಮೆಗಳನ್ನು ಪ್ರೋತ್ಸಾಹಿಸಲು ಬೇರೆ ಬೇರೆ ರಾಜ್ಯಗಳಿಗೆ ಭೇಟಿ ನೀಡಿ ಸಾರ್ವಜನಿಕ ಆಲಿಕೆಯ ಸಭೆಯಲ್ಲಿ ಭಾಗವಹಿಸುವದಾಗಿ ತಿಳಿಸಿದರು. ಅವರು ಉದ್ದಿಮೆದಾರರಿಗೆ ವಿನಂತಿಸುತ್ತ, ಉದ್ದಿಮೆ ಆವರಣದಲ್ಲಿ ಮಳೆ ನೀರು ಕೊಯ್ಲು ಯೋಜನೆಗಳನ್ನು ಅಳವಡಿಸಿಕೊಳ್ಳಲು ಹಾಗೂ ಮಳೆ ನೀರನ್ನು ಶೇಖರಿಸಲು ವ್ಯವಸ್ಥೆಗಳನ್ನು ರೂಪಿಸಲು ಸಲಹೆ ನೀಡಿದರು. ಸ್ಥಳೀಯರಿಗೆ ಉದ್ಯೋಗವಕಾಶ, ಕೈಗಾರಿಕೆ ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು ಜಪಾನ ಹಾಗೂ ಕೋರಿಯಾ ದೇಶದ ಮಾದರಿಗಳಲ್ಲಿ ಆಯೋಜಿಸಲು ಸಲಹೆ ನೀಡಿದರು. ಅವರು ಉದ್ಯಮವನ್ನು ವಿನಂತಿಸುತ್ತ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಮೀಟಿಯನ್ನು, ಪರಿಸರ ಮಾಲಿನ್ಯ ಅಧಿಕಾರಿಗಳು ಮತ್ತು ಕಂಪನಿಯ ಅಧಿಕಾರಿಗಳು ಹಾಗೂ ಸ್ಥಳೀಯರೊಂದಿಗೆ ರಚಿಸಬೇಕು. ಉದ್ದಿಮೆದಾರರಿಗೆ 10 ಕಿ. ಮೀ.

ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟ ಸುಧಾರಿಸಲು, ಸ್ಥಳೀಯರ ಆರೋಗ್ಯವನ್ನು ಕಾಪಾಡಲು, ಹಾಗೂ ಔಷಧಿಯ ಸಸ್ಯಗಳನ್ನು ಬೆಳೆಸಲು ವಿನಂತಿಸಿದರು. ವಾಯು, ನೀರು, ಶಬ್ದ ಮಾಲಿನ್ಯ ಮತ್ತು ಭೂಮಿಯ ರಕ್ಷಣೆಗಾಗಿ ಹಾಗೂ ಪರಿಸರ ಸಮತೋಲನ ಹಾಗೂ ಪರಿಸರ ರಕ್ಷಣೆಗೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ವಿನಂತಿಸಿದರು. ಉದ್ಯಮದ ಸಲಹೆಗಾರರು ಪೂರ್ಣ ಪ್ರಮಾಣದ ಇ ಐ ಎ ವರಧಿಯನ್ನು ಮಾಡಿರುತ್ತಾರೆ. ಸದರಿ ಸಾರ್ವಜನಿಕ ಆಲಿಕೆಯ ಸಮೀತಿಯು ಶ್ರೀ ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೇಟ್ ಲೀಮಿಟೆಡ್ ಉದ್ದಿಮಿಗೆ ಷರತ್ತು ರಹಿತ ವಿಮೋಚನಾ ಪತ್ರವನ್ನು ನೀಡುವಂತೆ ವಿನಂತಿಸಿದರು.

5. **ಶ್ರೀ. ಎಚ್. ಮಧುಬಾಬು, ಹೈದರಾಬಾದ.**

ನಾನು ಈ ಮೊದಲು ಶ್ರೀ. ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಕಾರ್ಖಾನೆಯ ಪರಿಸರ ಸಾರ್ವಜನಿಕ ಸಭೆ ಬಗ್ಗೆ ನನ್ನ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿ ಪತ್ರವನ್ನು ಬರೆದು ಸಂಬಂಧಿಸಿದ ಇಲಾಖೆಗೆಳಿಗೆ ಕಳುಹಿಸಿದ್ದೆನೆ ಮತ್ತು ಶ್ರೀ. ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಕಾರ್ಖಾನೆಯನ್ನು ನಾನು ಬೆಂಬಲಿಸುತ್ತೇನೆ.

6. **ಶ್ರೀ. ಬಿ. ವ್ಹಿ. ರೆಡ್ಡಿ, ಬಳ್ಳಾರಿ.**

ಶ್ರೀ.ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಕಾರ್ಖಾನೆಯ ಮ್ಯಾನೆಜ್ಮೆಂಟನವರಿಗೆ ಶುಭಾಶಯಗಳು ಸಮಿಪದಲ್ಲಿ ಇರುವ ಹಳ್ಳಿಗಳ ಜನರಿಗೆ ಈ ಆರಗ್ಯಾನಿಕ್‌ನಿಂದ ತೊಂದರೆಯಾಗದಂತೆ ಹೈ-ಟೆಕ್ನಾಲಜಿ ಯಂತ್ರೋಪಕರಣಗಳನ್ನು ಬಳಕೆ ಮಾಡಬೇಕು. ಉದ್ದಿಮೆ ಸ್ಥಾಪನೆಯಿಂದ ಉದ್ಯೋಗ ಅವಕಾಶಗಳು ಹೆಚ್ಚಾಗಿ ಈ ಕ್ಷೇತ್ರವು ಅಭಿವೃದ್ಧಿ ಹೊಂದುತ್ತದೆ, ಇದರಿಂದ ಆರೋಗ್ಯ ಶಿಬಿರಗಳು ಹಾಗೂ ಇನ್ನಿತರ ಕಾರ್ಯಗಳು ಅಭಿವೃದ್ಧಿಗಳಾಗುವುದರಿಂದ ಈ ಕೈಗಾರಿಕೆ ಸ್ಥಾಪಿಸಲು ನನ್ನ ಬೆಂಬಲವಿದೆ.

7. **ಶ್ರೀ ಅಜಯ ಪಂಥೋಜಿ, ನೇಜ್.**

ಶ್ರೀ.ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಸ್ಥಾಪಿಸಲು ನಮಗೆನು ತೊಂದರೆ ಇಲ್ಲಾ, ಪರಿಸರ ವರದಿಯು ಕೂಡಾ ಆಗಿರುವುದರಿಂದ ಕೈಗಾರಿಕೆ ಸ್ಥಾಪಿಸಲು ನಮ್ಮ ವಿರೋಧವಿಲ್ಲ ಮತ್ತು ಸ್ಥಳೀಯ ಜನರಿಗೆ ಉದ್ಯೋಗಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು ಎಂದು ತಿಳಿಸಿದರು.

8. **ಶ್ರೀಮತಿ. ಶೋಬಾ ಲಕ್ಷಣ ನಾಯಿಕ, ನೇಜ್.**

ಶ್ರೀ.ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಉದ್ದಿಮೆಯನ್ನು ಸ್ಥಾಪಿಸಲು ನಾನು ಬೆಂಬಲಿಸುತ್ತೇನೆ.

9. **ಶ್ರೀಮತಿ. ಸಂಗೀತಾ ನಾಯಿಕ, ನೇಜ್.**

ಶ್ರೀ.ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಉದ್ದಿಮೆಯ ಮಾಲೀಕರು ನಮಗೆ ಈಗಾಗಲೇ ತಮ್ಮ ಕೃಷಿ ಜಮೀನುಗಳಲ್ಲಿ ಕೆಲಸಗಳನ್ನು ಒದಗಸಿದ್ದು, ಈ ಕೈಗಾರಿಕೆ ಸ್ಥಾಪನೆಯಾದರೆ ಅದರಿಲ್ಲಿ ನಮಗೆ ಉದ್ಯೋಗವಕಾಶ ಸಿಗುವುದರಿಂದ ಈ ಕೈಗಾರಿಕೆ ಸ್ಥಾಪಿಸಲು ನಾನು ಬೆಂಬಲಿಸುತ್ತೇನೆ.

10. **ಶ್ರೀ ಆಂಜನೇಯ ನಾಗೇನಹಳ್ಳಿ, ರಾಣೆಬೆನ್ನೂರ.**

ಶ್ರೀ.ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಕಾರ್ಖಾನೆಯ ಈ ಪರಿಸರ ಸಾರ್ವಜನಿಕರ ಸಭೆಯು ಹಬ್ಬದ ವಾತಾವರಣವನ್ನುಂಟು ಮಾಡಿದೆ. ಈ ಗ್ರಾಮದ ಜನರು ಯಾವುದೇ ರೀತಿಯಾದ ವಿರೋಧ ವ್ಯಕ್ತ ಪಡಿಸಿಲ್ಲ **ಕಾರಣ ಕೈಗಾಗರಿಕೆ ಸ್ಥಾಪನೆ ಆದರೆ ಸುತ್ತಮುತ್ತಲಿನ ಜನರಿಗೆ**

ಉದ್ಯೋಗ ಸಿಗುವುದರ ಬಗ್ಗೆ ನಂಬಿಕೆಯಿದೆ. ಎಲ್ಲರೂ **IAS, KAS, Doctors** ಆಗಲು ಸಾಧ್ಯವಿಲ್ಲ, ಯಾವುದೇ ಸರಕಾರ ಬಂದರು ಸರಕಾರಿ ನೌಕರಿಗಳು ಲಭ್ಯವಿರುವುದಿಲ್ಲ. ಶ್ರೀ. ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಕಾರ್ಖಾನೆಯು 6 ಕೋಟಿ ವೆಚ್ಚದಲ್ಲಿ ನಿರ್ಮಾಣ ಆಗುವುದರಿಂದ, ಸಿ ಎಸ್ ಆರ್ ಅಡಿ ಪ್ರತಿ ವರ್ಷ 15 ಲಕ್ಷ ರೂಪಾಯಿಗಳ ಅಭಿವೃದ್ಧಿಯನ್ನು ಸುತ್ತಮುತ್ತಲಿನ ಗ್ರಾಮಗಳಲ್ಲಿ ನಡೆಸುವುದರಿಂದ ಈ ಪ್ರದೇಶವು ಅಭಿವೃದ್ಧಿ ಹೊಂದುತ್ತದೆ. ಈ ಕಾರ್ಖಾನೆಗೆ ಸುತ್ತಮುತ್ತಲಿನ ಎಲ್ಲ ಜನರ ಬೆಂಬಲವಿದೆ. ಪರಿಸರವನ್ನು ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಗಿಡ ಮರವನ್ನು ಬೆಳಸಿ ನಮ್ಮ ಪ್ರಕೃತಿಯನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ.

11. **ಶ್ರೀಮತಿ ಮಂಜುಳಾ, ಚಿತ್ರದುರ್ಗ.**

ಶ್ರೀ.ಚಂದ್ರೇಶ್ವರಿ ಕೆಮಿಕಲ್ಸ್ ಪ್ರೈವೆಟ್ ಲಿಮಿಟೆಡ್ ಕಾರ್ಖಾನೆಯನ್ನು ಸ್ಥಾಪಿಸಲು ಅನುಮತಿಯನ್ನು ಕೇಳಿರುತ್ತಾರೆ. ಮಳೆ ಇಲ್ಲದೆ, ಬೆಳೆ ಇಲ್ಲದೆ ಎಷ್ಟೋ ರೈತ ಕುಟುಂಬಗಳು ಜೀವನ ನಡೆಸಲು ಪರಿತಪಿಸುತ್ತಿದ್ದಾರೆ. ಈ ಕಾರ್ಖಾನೆ ಸ್ಥಾಪನಯಿಂದ ರೈತರಿಗೆ ತೊಂದರೆ ಆಗುತ್ತದೆ ಅನ್ನೋ ಮನೊಭಾವನೆ ನಮ್ಮ ರೈತ ಭಾಂದವರಲ್ಲಿದೆ ಎಂಬುದು ನನ್ನ ಅನಿಸಿಕೆ, ಆದರೆ ರೈತರಿಗೆ ಇದರಿಂದ ತೊಂದರೆಯಾಗುತ್ತದೆ ಎಂಬುದು ತಪ್ಪು. ಸ್ಥಳೀಯರಿಗೆ ಉದ್ಯೋಗದ ಅವಕಾಶ ನೀಡಬೇಕೆಂದು ಕೈಗಾರಿಕೆಯವರಿಗೆ ಕೇಳಿಕೊಳ್ಳುತ್ತೇವೆ. ಪರಿಸರ ಮಾಲಿನ್ಯದಿಂದ ಗಿಡ ಮರಗಳಿಗೆ, ಪ್ರಾಣಿ ಪಕ್ಷಿಗಳಾಗಲಿ, ಸಾರ್ವಜನಿಕರಿಗೆ, ರೈತ ಬಾಂಧವರಿಗೆ ಯಾವುದೇ ಒಂದು ಮಾಲಿನ್ಯದಿಂದ ತೊಂದರೆ ಯಾಗದಂತೆ ಹೊಸ ತಂತ್ರಜ್ಞಾನದ ಯಂತ್ರೋಪಕರಣಗಳನ್ನು ಅಳವಡಿಸಿಕೊಂಡು ಅದನ್ನು ತಡೆಗಟ್ಟುವಂತಹ ಕ್ರಮ ಕೈಗೊಳ್ಳಬೇಕು. ಸದರಿ ಕೈಗಾರಿಕೆಯವರು ರೈತರ ಮತ್ತು ಸಾರ್ವಜನಿಕರ ಜೊತೆ ಉತ್ತಮ ಬಾಂಧವ್ಯ ಬೆಳಸಿದರೆ ಕಾರ್ಖಾನೆ ಮತ್ತು ರೈತರ ನಡುವೆ ವಹಿವಾಟ ಹೆಚ್ಚುತ್ತವೆ.

******

ಡಾ. ಎಸ್.ಬಿ. ಬೊಮ್ಮನಹಳ್ಳಿ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಮಾತನಾಡುತ್ತಾ ತಾವು ಇಲ್ಲಿಯವರೆಗೆ ಈ ಘಟಕದ ಸ್ಥಾಪನೆ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ.ಅದರಲ್ಲಿ ಪ್ರಮುಖವಾದ ಬೇಡಿಕೆ, ಸ್ಥಳೀಯರಿಗೆ ಉದ್ಯೋಗ ಅವಕಾಶ ಕೊಡಬೇಕೆಂದು. ಈ ಕಂಪನಿಯ ಸ್ಥಾಪಕರಿಗೆ, ಸಾರ್ವಜನಿಕರ ಪರವಾಗಿ ಮತ್ತು ಸರ್ಕಾರದ ಪರವಾಗಿ ವಿನಂತಿ ಏನೆಂದರೆ ತಾವು ಇಲ್ಲಿ ಕೊಡತಕ್ಕಂತಹ ಎಲ್ಲ ಉದ್ಯೋಗಗಳನ್ನು ಸ್ಥಳೀಯರಿಗೆ ಕೊಡಬೇಕು ಎಂದು ಸೂಚನೆ ಕೊಡುತ್ತಿದ್ದೇನೆ.

ಅದರ ಜೊತೆಗೆ ಒಂದು ವೇಳೆ ಅವರಲ್ಲಿ ಕ್ಷಮತೆ ಇಲ್ಲವೆಂದು ಕಂಡು ಬಂದರೆ ಅಥವಾ ತಾಂತ್ರಿಕ ಮಾಹಿತಿ ಇಲ್ಲವೆಂದು ಕಂಡು ಬಂದಲ್ಲಿ ತರಬೇತಿಯನ್ನು ಕೊಡುವ ಅವಶ್ಯಕತೆ ಇರುತ್ತದೆ. ತರಬೇತಿ ನೀಡಿದ ನಂತರ ನಿಮ್ಮ ಕಂಪನಿಯಲ್ಲಿ ಸೇರಿಕೊಳ್ಳಲು ಆವಕಾಶವನ್ನು ಮಾಡಿರಿ. ಇಲ್ಲಿ ಒಕ್ಕೊರಿಲಿನಿಂದ ಅವರೆಲ್ಲರೂ ಉದ್ದಿಮೆ ಸ್ಥಾಪನೆಗೆ ನಮ್ಮದೇನು ಅಭ್ಯಂತರವಿಲ್ಲ, ವಿರೋಧವಿಲ್ಲಾ ಆದರೆ ನಮಗೆ ಉದ್ಯೋಗ ಕೊಡಬೇಕೆಂದು ಹೇಳಿದರು. ಅವರಿಗೆಲ್ಲಾ ಉದ್ದಿಮೆ ಸ್ಥಾಪಿಸಿದರೆ ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆಯನ್ನುವ ಮಹಾದಾಶೆ ಇದೆ. ಅವರು ಇಟ್ಟಿರುವ ಭರವಸೆಯನ್ನು ಹುಸಿಗೊಳಿಸಬೇಡಿ. ಸ್ಥಳೀಯರಿಗೆ ಉದ್ಯೋಗ ಕೊಟ್ಟರೆ ಸಂಪೂರ್ಣವಾದ ಸಹಕಾರ ಹೆಚ್ಚಿನ ರೀತಿಯಲ್ಲಿ ಉದ್ದಿಮೆಗೆ ಸಿಗುತ್ತದೆ. ಇದರಿಂದ ಸ್ಥಳೀಯವಾಗಿ ಆರ್ಥಿಕ ಪರಿಸ್ಥಿತಿಯು ಸುಧಾರಣೆ ಆಗುತ್ತದೆ.

ಎರಡನೇಯದಾಗಿ ಆರೋಗ್ಯದ ಮೇಲೆ ಆಗುವ ಪರಿಣಾಮಗಳ ಬಗ್ಗೆ ತಾವು ಈಗಾಗಲೇ ಆರೋಗ್ಯ ತಪಾಸಣೆಯನ್ನು ಮಾಡುತ್ತೇವೆ. ಬೇರೆ, ಬೇರೆ ಕೆಲಸಗಳಿಗೂ ಒಟ್ಟು 15 ಲಕ್ಷ ರೂಪಾಯ ನಿಗದಿಪಡಿಸಿದ್ದೀರಿ. ಈ ಕಾರ್ಖಾನೆ ಸ್ಥಾಪನೆ ಆಗುವ ಮುಂಚಿತವಾಗಿ ಆರೋಗ್ಯ ತಪಾಸಣೆ ಮಾಡಿ, ಆರೋಗ್ಯ ಗುರುತಿನ ಚೀಟಿಯನ್ನು ಸುತ್ತಮುತ್ತಲಿನ 10 ಕೀಮಿ ಪ್ರದೇಶದಲ್ಲಿರುವ ಗ್ರಾಮಗಳ ಜನರಿಗೆ ನೀಡಬೇಕು. ಅವರಿಗೆ ಪ್ರಮುಖ ಅಂಗಾಂಗಳ ಪರಿಶೀಲನೆ ಮಾಡಿ, ದಾಖಲಿಸಬೇಕು. ನಂತರ ಪ್ರತಿ ವರ್ಷ ತಪಾಸಣೆ ನಡಿಸಿದರೆ ಆರೋಗ್ಯದಲ್ಲಿ ವ್ಯತ್ಯಾಸ & ವ್ಯತರಿಕ್ತ ಪರಿಣಾಮ ಅಥವಾ ದುಷ್ಪರಿಣಾಮ ಆಗಿರುವ ಬಗ್ಗೆ ಮಾಹಿತಿಯು ಗೊತ್ತಾಗುತ್ತದೆ. ಆಗ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಕಾರ್ಖಾನೆ ಪ್ರಾರಂಭ ಮಾಡುವ ಮುಂಚಿತವಾಗಿ ಆರೋಗ್ಯ ತಪಾಸಣೆ ನಡಿಸಿ 10 ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಗ್ರಾಮದ ಜನರಿಗೆ, ಎಲ್ಲಾ ಕುಟುಂಬದ ಜನರಿಗೆ ಆರೋಗ್ಯ ತಪಾಸಣೆ ಮಾಡಿ ಆರೋಗ್ಯ ಕಾರ್ಡನ್ನು ಕೊಡಿ. ಅದೇ ಕಾರ್ಡಿನಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಪ್ರಮುಖ ಮಾನದಂಡಗಳನ್ನು ಪ್ರತಿ ವರ್ಷ ನಮೂದಿಬೇಕು. ಅವರಿಗೆ ಏನಾದರೂ ಆರೋಗ್ಯ ಸಮಸ್ಯೆ ಬಂದರೆ ಅವರಿಗೆ ಚಿಕಿತ್ಸೆ ಕೊಡಲು ವೈದ್ಯರಿಗೆ ಅನುಕೂಲವಾಗುತ್ತದೆ ಮತ್ತು ಯಾವ ಕಾರಣದಿಂದ ಅವರಿಗೆ ಆರೋಗ್ಯದ ಸಮಸ್ಯೆ ಇದೆ ಎಂದು ಕಂಡು ಹಿಡಿಯಲು ಅನುಕೂಲವಾಗುತ್ತದೆ. ಈ ಪ್ರಮುಖ ಯೋಜನೆಯನ್ನು ತಾವು ಅಳವಡಿಸಿಕೊಳ್ಳಬೇಕೆಂದು ಸೂಚನೆ ಕೊಡುತ್ತೇನೆ.

ವಂದನಾರ್ಪಣೆಯೊಂದಿಗೆ ಈ ಕಾರ್ಯಕ್ರಮವು ಮುಕ್ತಾಯಗೊಂಡಿತು.

(ಡಾ. ಎಸ್.ಬಿ. ಬೊಮ್ಮನಹಳ್ಳಿ )
ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ
ದಂಡಾಧಿಕಾರಿಗಳು ಮತ್ತು ಪರಿಸರ ಸಾರ್ವಜನಿಕ
ಆಲಿಕೆ ಸಭೆ ಅಧ್ಯಕ್ಷರು ಬೆಳಗಾವಿ, ಕರ್ನಾಟಕ.